# ಕರ್ನಾಟಕ ವಿಧಾನ ಪರಿಷತ್

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ರವಿ ಇವರು ನಿಯಮ 72ರ ಮೇರೆಗೆ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ

**ಪ್ರಶ್ನೆ.**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷಿ ಇಲಾಖೆಯು ಏಕಕಾಲಕ್ಕೆ ಎರಡು ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿದ್ದು, ಬೆಂಗಳೂರು ನಗರದ 4 ತಾಲ್ಲೂಕುಗಳು ಮತ್ತು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಇದೇ ಅಧಿಕಾರಿ ವಲಯ ಕಾರ್ಯನಿರ್ವಹಿಸಬೇಕಾಗಿದೆ. ಗ್ರಾಮಾಂತರ ಜಿಲ್ಲೆಗೆ ಮಂಜೂರಾಗಿರುವ ಕೃಷಿ ಅಧಿಕಾರಿ ಮತ್ತು ಇತರೆ ಹುದ್ದೆಗಳು ಸಂಖ್ಯೆ 102, ಆದರೆ ಕಾರ್ಯನಿರ್ವಹಿಸುತ್ತಿರುವವರು 56 ಮಂದಿ. ಹಾಗೆಯೇ 17 ಹೋಬಳಿಗಳ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳ ಕಾರ್ಯಭಾರ ಸೇರಿ ಕೃಷಿ ಇಲಾಖೆಯ ನಾನಾ ಯೋಜನೆಗಳನ್ನು ಜಾರಿಗೊಳಿಸುವ ಜವಾಬ್ದಾರಿಯು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 56 ಮಂದಿ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆಯೇ ಇದೆ. ಇದರಿಂದ ಅಧಿಕಾರಿಗಳು ಸಹ ತೀವ್ರ ಒತ್ತಡ ಅನುಭವಿಸುತ್ತಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಖಾಲಿ ಇರುವ ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಮತ್ತು ಇತರ ಸಿಬ್ಬಂದಿಗಳನ್ನು ಕೂಡಲೇ ಭರ್ತಿ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗೆ ಅಧಿಕಾರಿ ಮತ್ತು ಸಿಬ್ಬಂದಿಗಳ ಹುದ್ದೆಗಳು ಸೇರಿದಂತೆ ಒಟ್ಟು-231 ಹುದ್ದೆಗಳು ಮಂಜೂರಾಗಿದ್ದು ಪ್ರಸ್ತುತ 109 ಹುದ್ದೆಗಳು ಭರ್ತಿಯಾಗಿದ್ದು 122 ಹುದ್ದೆಗಳು ಖಾಲಿಯಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.

| ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|
| ಜಂಟಿ ಕೃಷಿ ನಿರ್ದೇಶಕರು | 1 | 1 | 0 |
| ಉಪ ಕೃಷಿ ನಿರ್ದೇಶಕರು | 1 | 1 | 0 |
| ಸಹಾಯಕ ಕೃಷಿ ನಿರ್ದೇಶಕರು | 15 | 15 | 0 |
| ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ) | 02 | 02 | 0 |
| ಕೃಷಿ ಅಧಿಕಾರಿ | 51 | 36 | 15 |
| ಸಹಾಯಕ ಕೃಷಿ ಅಧಿಕಾರಿ | 66 | 15 | 51 |
| ಆಡಳಿತಾಧಿಕಾರಿ | 1 | 1 | 0 |
| ಸಹಾಯಕ ಆಡಳಿತಾಧಿಕಾರಿ | 1 | 0 | 1 |
| ಅಧೀಕ್ಷಕರು | 11 | 10 | 1 |
| ಪ್ರಥಮ ದರ್ಜೆ ಸಹಾಯಕರು | 14 | 5 | 9 |
| ದ್ವಿತೀಯ ದರ್ಜೆ ಸಹಾಯಕರು | 19 | 12 | 7 |
| ಬೆರಳಚ್ಚುಗಾರರು | 11 | 5 | 6 |
| ವಾಹನ ಚಾಲಕರು | 10 | 0 | 10 |
| ಗ್ರೂಪ್ ಡಿ | 28 | 6 | 22 |
| ಒಟ್ಟು | **231** | **109** | **122** |

ಕೃಷಿ ಇಲಾಖೆಯಲ್ಲಿ ಖಾಲಿ ಇರುವ ತಾಂತ್ರಿಕ ಹುದ್ದೆಗಳ ಕೊರತೆ ನೀಗಿಸಲು ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ 28 ದಾಸ್ತಾನು ನಿರ್ವಹಣಾ ಸಿಬ್ಬಂದಿಗಳನ್ನು ಪಡೆದು ಕಚೇರಿಯಲ್ಲಿ ಕಾರ್ಯ ನಿರ್ವಹಿಸುವಂತೆ ಕ್ರಮವಹಿಸಲಾಗಿದೆ. ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಲು ATMA (Agriculture Technology Management Agency) ಯೋಜನೆಯಡಿ ಹೋಬಳಿ ಮಟ್ಟದಲ್ಲಿ 13 ಸಹಾಯಕ ತಾಂತ್ರಿಕ ವ್ಯವಸ್ಥಾಪಕರುಗಳನ್ನು (ATM), ತಾಲ್ಲೂಕು ಮಟ್ಟದಲ್ಲಿ 06 ಬ್ಲಾಕ್ ತಾಂತ್ರಿಕ ವ್ಯವಸ್ಥಾಪಕರುಗಳನ್ನು (BTM) ಹಾಗೂ ಜಿಲ್ಲಾ ಮಟ್ಟದಲ್ಲಿ ಒಬ್ಬರು ಉಪ ಯೋಜನಾ ನಿರ್ದೇಶಕರು ಗಳನ್ನು (DPD) ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಕಚೇರಿ ಕೆಲಸ ವಿಳಂಬವಾಗದಂತೆ ಹಾಗೂ ರೈತರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಕ್ರಮವಹಿಸಲಾಗಿದೆ.

**ಕೃಷಿ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಒಟ್ಟು 4092 ಹುದ್ದೆಗಳು ಮಂಜೂರಾಗಿರುತ್ತವೆ. ಈ ಪೈಕಿ 1751 ಹುದ್ದೆಗಳು ಭರ್ತಿಯಾಗಿದ್ದು, 2341 ಹುದ್ದೆಗಳು ಖಾಲಿಯಿರುತ್ತವೆ. ಒಟ್ಟಾರೆಯಾಗಿ ಶೇ.50ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿಯಿರುತ್ತವೆ. ಈ ಪೈಕಿ ಖಾಲಿ ಇರುವ 1568 ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಹಾಗೂ ಪ್ರತಿ 02 ಗ್ರಾಮ ಪಂಚಾಯತಿಗಳಿಗೆ 01 ಹುದ್ದೆಯಂತೆ ಒಟ್ಟು 3011 ಕೃಷಿ ಸೇವಕ ಹುದ್ದೆಗಳನ್ನು ಸೃಜಿಸಲು** ಸಹಮತಿ ನೀಡುವಂತೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯ ಸಹಮತಿ ದೊರೆತ ನಂತರ ಮಂಜೂರಾದ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಂಡು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು. ಇನ್ನುಳಿದಂತೆ ಆಡಳಿತ ವಿಭಾಗದ ಲಿಪಿಕ ವರ್ಗದ ಹಾಗೂ ಇತರೆ ಸಿಬ್ಬಂದಿಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸಂಖ್ಯೆ: AGRI-AGS/ 95/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು